**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 06.03.2026**

**ಪಾಟೀ ಸವಾಲುಃ ಪ್ರತಿವಾದಿ 5 ರಿಂದ 7 ರ ಪರ ಶ್ರೀ ಕೆ ಎಸ್ ವಿ ವಕೀಲರಿಂದ**

1. 2 ಮತ್ತು 3 ನೆ ಪ್ರತಿವಾದಿಯು ನನ್ನ ಅಕ್ಕಂದಿರು ಎಂದರೆ ಸರಿ . ಅವರ ಪರವಾಗಿ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ . 1 ನೇ ಪ್ರತಿವಾದಿ ಮೂರ್ತಿ ನನಗೆ ಗೊತ್ತು . 1 ನೇ ಪ್ರತಿವಾದಿಯ ತಂದೆಯ ಹೆಸರು ಕುಳ್ಳ . ಅವರನ್ನು ಖಾಕಿ ಕುಳ್ಳ ಎಂದು ಕರೆಯುತ್ತಾರೆ ಎಂದರೆ ಸರಿ . 1 ನೆ ಪ್ರತಿವಾದಿಯ ತಂದೆ ಕುಳ್ಳರವರಿಗೆ ದೇವಿ ಮತ್ತು ಪುಟ್ಟಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ. ದೇವಿ ಮತ್ತು ಕುಳ್ಳಯ್ಯರವರಿಗೆ ಮೂರು ಜನ ಮಕ್ಕಳು ಜಯಮ್ಮ , ರಮೇಶ ಮತ್ತು ಗುರುವ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಜಯಮ್ಮ ರವರು ಇನ್ನು ಜೀವಂತ ಇದ್ದಾರೆ . ರಮೇಶ ಮತ್ತು ಗುರುವ ರವರು ಜೀವಂತ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

2. ಕುಳ್ಳರವರ ತಂದೆಯ ಹೆಸರು ಚೆನ್ನ ಎಂದರೆ ಸರಿ . ಚೆನ್ನರವರಿಗೆ ಇಬ್ಬರು ಗಂಡು ಮಕ್ಕಳು ಎಂದರೆ ಸರಿ . ಅವರು ಕುಳ್ಳಯ್ಯ ಮತ್ತು ಕರಿಯಯ್ಯ ಎಂದರೆ ಸರಿ . ಕರಿಯಯ್ಯ ರವರಿಗೆ ಬೇಲೂರಯ್ಯ ಎಂದು ಎರಡು ಹೆಸರು ಇದೆ ಎಂದರೆ ನನಗೆ ಗೊತ್ತಿಲ್ಲ. ಕರಿಯಯ್ಯ ರವರಿಗೆ ಪಾಪ , ಜಯಂತಿ , ಕಲಾ ದಯಾನಿ ಮತ್ತು ರವಿ ಎಂಬ ಐವರು ಮಕ್ಕಳು ಇರುತ್ತಾರೆ ಎಂದರೆ ಸರಿ . 1 ನೆ ಪ್ರತಿವಾದಿಯ ಅಜ್ಜ ಚೆನ್ನರವರ ತಂದೆ ಯ ಹೆಸರು ಕುಳ್ಳ ಎಂದರೆ ಸರಿ . ಚೆನ್ನ ನ ತಂದೆ ಕುಳ್ಳರವರಿಗೆ ಚೆನ್ನ ಅಲ್ಲದೆ ಬೇಲೂರಯ್ಯ , ದುಂಡಣ್ಣ , ಹೂಪಣ್ಣ ಮತ್ತು ಸಣ್ಣಹೆಣ್ಣು ಎಂಬ ಮಕ್ಕಳು ಇದ್ದರು ಎಂದರೆ ಗೊತ್ತಿಲ್ಲ. ಸದರಿ

ಬೇಲೂರಯ್ಯ ರವರಿಗೆ ಪ್ರತಿವಾದಿ 5 ರಿಂದ 7 ರವರು ಮಕ್ಕಳು ಎಂದರೆ ಸರಿ . ಸಾಕ್ಷಿ ಮುಂದುವರೆದು ಅವರ ಜೊತೆ ಇನ್ನು ಇಬ್ಬರು ಮಕ್ಕಳು ಇದ್ದಾರೆ ಎಂದು ನುಡಿದರು. ಸದರಿಯವರ ಹೆಸರು ಕುಳ್ಳಯ್ಯ ಅಲಿಯಾಸ್ ಕಾಳಯ್ಯ ಮತ್ತು ವಾದಿ ಆಗಿರುತ್ತದೆ . ಬೇಲೂರಯ್ಯರವರಿಗೆ ನನ್ನ ತಂದೆ ಕುಳ್ಳ ಮತ್ತು ವಾದಿಯವರು ಮಕ್ಕಳು ಅಲ್ಲ ಎಂದರೆ ಸರಿಯಲ್ಲ.

3. ಚೆನ್ನ ರವರ ತಂದೆ ಕುಳ್ಳ ಇವರು ಬಲಗೈ ಹೆಗ್ಗತ್ತೂರು ಚೆನ್ನ ನ ಮಗ ಎಂದರೆ ಸರಿ . ನನ್ನ ತಂದೆ ಮತ್ತು ವಾದಿಯವರು ಬೇಲೂರಯ್ಯರವರ ಮಕ್ಕಳು ಎಂದು ತೋರಿಸಲು ನಾನು ಯಾವುದೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ದಾವೆಯನ್ನು ಮರೂರು ಗ್ರಾಮದ ಸರ್ವೆ ನಂ 51, 52 ಮತ್ತು ಹುಲುಸೆ ಗ್ರಾಮದ ಸರ್ವೆ ನಂ 6 ರ ಮೇಲೆ ಸಲ್ಲಿಸಿರುತ್ತೇವೆ . ಈ ದಾವಸ್ವತ್ತಿನ ಸರ್ವೆ ನಂ 51, 52 ಕ್ಕೆ ಚೆಕ್ಕುಬಂದಿ ಪೂರ್ವಕ್ಕೆ ಜವರಯ್ಯ , ಪಶ್ಚಿಮಕ್ಕೆ ಜವರಯ್ಯ , ಉತ್ತರಕ್ಕೆ ಮೂರ್ತಿ , ದಕ್ಷಿಣಕ್ಕೆ ಬ್ರಮ್ಮಯ್ಯ ರವರ ಸ್ವತ್ತು ಇರುತ್ತದೆ.

4. ದಾವಾಸ್ವತ್ತು ಬಲಗೈ ಹೆಗ್ಗತ್ತೂರು ಚೆನ್ನ ರವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾಸ್ವತ್ತನ್ನು ಬೇಲೂರಯ್ಯ , ಪ್ರತಿವಾದಿ 5 ರಿಂದ 7 ರವರು ಕೃಷಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು 1 ನೆ ಪ್ರತಿವಾದಿಯು ಸೇರಿ ವ್ಯವಸಾಯ ಮಾಡುತ್ತಿದ್ದು , ಬೇಲೂರಯ್ಯರವರು ವ್ಯವಸಾಯ ಮಾಡುತ್ತಿಲ್ಲ ಎಂದು ನುಡಿದರು. 5 ರಿಂದ 7 ನೆ ಪ್ರತಿವಾದಿಯವರು ಬೆಂಗಳೂರಿನಲ್ಲಿ ವಾಸವಿರುತ್ತಾರೆ . ಪ್ರತಿವಾದಿ 5 ರವರು ಮೊದಲು

ಕೆಲಸದಲ್ಲಿ ಇದ್ದು ಈಗ ನಿವೃತ್ತಿ ಆಗಿರುತ್ತಾರೆ. ಪ್ರತಿವಾದಿ 5 ರವರು ಕೆ ಪಿ ಎಸ್ ಇ ನಲ್ಲಿ ಜಂಟಿ ಕಾರ್ಯದರ್ಶಿಯಾಗಿದ್ದರು . ಪ್ರತಿವಾದಿ 6 ರವರು ಮರೂರು ಹಳ್ಳಿಯಲ್ಲಿ ವಾಸವಿದ್ದು , ವ್ಯವಸಾಯ ಮಾಡಿಕೊಂಡಿರುತ್ತಾರೆ. ಪ್ರತಿವಾದಿ 7 ರವರು ಕುಶಾಲನಗರ ದಲ್ಲಿ ವಾಸವಿದ್ದು ಹಾಸ್ಟೆಲ್ ನಲ್ಲಿ ಅಡುಗೆ ಕೆಲಸ ಮಾಡಿಕೊಂಡಿರುತ್ತಾರೆ. ನಾನು 1988 ನೆ ಇಸವಿಯಲ್ಲಿ ಜನಿಸಿರುತ್ತೇನೆ. ನನ್ನ ಅಕ್ಕ ಪ್ರತಿವಾದಿ 3 ರವರು ನನಗಿಂತ ಒಂದು ಎರಡು ವರುಷ ದೊಡ್ಡವರು . ನನಗೆ 3 ನೆ ಪ್ರತಿವಾದಿಯವರ ಹುಟ್ಟಿದ ದಿನಾಂಕ ಗೊತ್ತಿಲ್ಲ.ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ದಿಃ 05.05.1980 ರಲ್ಲಿ 3 ನೇ ಪ್ರತಿವಾದಿಯು ಅರ್ಜಿ ಬರಕೊಂಡ ಮೇರೆಗೆ ಕುಳ್ಳಯ್ಯ ಹಾಗೂ 4 ರಿಂದ 6 ಪ್ರತಿವಾದಿಗಳನ್ನು ಜಮಾ ಬಂದಿಯಲ್ಲಿ ಅವರ ಹೆಸರುಗಳನ್ನು ಸೇರ್ಪಡೆ ಮಾಡಲಾಗಿರುತ್ತದೆ ಎಂಬುದು ಸುಳ್ಳು ಎಂದರೆ ಸರಿಯಲ್ಲ.

5. 5 ನೆ ಪ್ರತಿವಾದಿಯವರೆ ಅರ್ಜಿ ಸಲ್ಲಿಸಿ 5 ರಿಂದ 7 ಪ್ರತಿವಾದಿಯವರ ಹೆಸರಗಳನ್ನು ಜಮಾ ಬಂದಿಯಲ್ಲಿ ಸೇರ್ಪಡೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ವಾದಿ ನನ್ನ ತಂಗಿಯ ತಂದೆ ಅಂದರೆ ಅತ್ತೆ . ನನ್ನ ತಂದೆ ಕುಳ್ಳ ಮತ್ತು ವಾದಿಗೂ ಮತ್ತು 1 ನೆ ಪ್ರತಿವಾದಿ ಹಾಗೂ 5 ರಿಂದ 7 ನೆ ಪ್ರತಿವಾದಿಯವರಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತು 1 ನೆ ಪ್ರತಿವಾದಿ ಮತ್ತು 5 ರಿಂದ 7 ನೆ ಪ್ರತಿವಾದಿಗೆ ಮಾತ್ರ ಸೇರಿರುತ್ತದೆ ಎಂದರೆ ಸರಿಯಲ್ಲ. ನಮಗಾಗಲಿ ಮತ್ತು ವಾದಿಗಾಗಲಿ ದಾವಾಸ್ವತ್ತಿನ ಮೇಲೆ ಯಾವುದೆ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. 5 ರಿಂದ 7 ನೆ ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನನಗೆ ಮದುವೆಯಾಗಿರುತ್ತದೆ. ಮದುವೆ ಸಮಯದಲ್ಲಿ ಲಗ್ನ ಪತ್ರಿಕೆಯನ್ನು ಮಾಡಿಸಿರುತ್ತೇನೆ ಅದು ಈ ಸಮಯದಲ್ಲಿ ಇಲ್ಲ. ನಾನು ಪಿ ಯು ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ಪ್ರತಿವಾದಿ 5 ರಿಂದ 7 ರವರು ನಮ್ಮ ಸಂಬಂಧಿಕರು ಎಂದು ತೋರಿಸಲು ಯಾವುದೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ